"ವಿಶದ"

66

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್, ರವರು ನಿಯಮ 72ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ**

**-: ಸೂಚನೆ :-**

ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ನಾಗಮಂಗಲ ಗ್ರಾಮದಲ್ಲಿನ ಸರ್ವೆ ನಂಬರ್ 604 ರಲ್ಲಿನ ಸರ್ಕಾರಿ ಖರಾಬು 40.00 ಎಕರೆ ಜಮೀನನ್ನು 1944-45ನೇ ಸಾಲಿನಲ್ಲಿ ಅಲ್ಪ ಸಂಖ್ಯಾತರ ವರ್ಗಕ್ಕೆ ಶ್ರೀ ಮೊಹಮ್ಮದ್ ಖಾಸೀಂ ರವರಿಗೆ ಮಂಜೂರಾಗಿದ್ದು, ಸದರಿ ಜಮೀನಿನ ದುರಸ್ತಿಯನ್ನು ಕಳೆದ 80 ವರ್ಷಗಳಿಂದ ಮಾಡಿರುವುದಿಲ್ಲ. ನಂತರ ಮೂಲ ಮಂಜೂರಾತಿದಾರರ ವಾರಸುದಾರರು 2002ನೇ ಸಾಲಿನಲ್ಲಿ ಮತ್ತು ಪುನಃ 2023ನೇ ಸಾಲಿನಲ್ಲಿ ಸದರಿ ಜಮೀನಿನ ದುರಸ್ತಿ ಮತ್ತು ಪೋಡಿಗಾಗಿ ಮೂಲ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದ್ದಾಗ್ಯೂ ಸದರಿ ಜಮೀನಿನಲ್ಲಿ ದುರಸ್ತಿ ಮತ್ತು ಪೋಡಿಯನ್ನು ಮಾಡಲು ನಾಗಮಂಗಲ ತಾಲ್ಲೂಕು ಕಛೇರಿಯ ಅಧಿಕಾರಿಗಳು (ತಹಶೀಲ್ದಾರ್ ಮತ್ತು ಎ.ಡಿ.ಎಲ್.ಆರ್. ಕಛೇರಿಯ) ಬಹಳ ಕಾಲದಿಂದ ವಿಳಂಬ ಮಾಡಿರುತ್ತಾರೆ. ಕಂದಾಯ ಇಲಾಖೆಯ ತಾಲ್ಲೂಕು ಕಛೇರಿಗಳಲ್ಲಿ ಜಮೀನನ್ನು ದುರಸ್ತಿ ಮಾಡಲು (ನಮೂನೆ 1-5 ಸಿದ್ಧಪಡಿಸಿ) ಕಂಪ್ಯೂಟರ್ ನಲ್ಲಿ ಸೃಷ್ಟಿಸಲಾಗುವ ಕಡತಗಳಲ್ಲಿ ನೌಕರರು ತಪ್ಪಾಗಿ ಮಾಹಿತಿ ನಮೂದಿಸಿದ್ದಲ್ಲಿ ತಾಲ್ಲೂಕು ಕಛೇರಿಯಲ್ಲಿ ಆದ ತಪ್ಪನ್ನು ಸರಿಪಡಿಸಲು ಆಯುಕ್ತರು, ಭೂಮಿ ಉಸ್ತುವಾರಿ ಕೋಶ, ಬೆಂಗಳೂರು ಇವರ ಕಛೇರಿಯ ಕಂಪ್ಯೂಟರ್ ಶಾಖೆಯಿಂದ ರದ್ದುಪಡಿಸಿ ಅವಕಾಶ ಕಲ್ಪಿಸಿರುವುದರಿಂದ ಅಧಿಕಾರಿ /ನೌಕರರುಗಳಿಂದಾಗಿ ತಪ್ಪಿಗಾಗಿ ರಾಜ್ಯದ ಭೂಮಾಲೀಕರು ಹಾಗೂ ರೈತರು ತಾಲ್ಲೂಕು ಕಛೇರಿಯಿಂದ ಕೇಂದ್ರ ಕಛೇರಿಗೆ, ಕೇಂದ್ರ ಕಛೇರಿಯಿಂದ ಜಿಲ್ಲಾ ಕಛೇರಿಗೆ ಅಲೆದರೂ, ಸದರಿ ತಪ್ಪನ್ನು ಸುಮಾರು 6 ತಿಂಗಳುಗಳ ಕಾಲ ಸರಿಪಡಿಸಲಾಗದ ಗಂಭೀರ ಪರಿಸ್ಥಿತಿ ನಿರ್ಮಾಣವಾಗಿರುವ ಕುರಿತು.

**-: ಹೇಳಿಕೆ :-**

ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ನಾಗಮಂಗಲ ಗ್ರಾಮದ ಸ.ನಂ.604ರಲ್ಲಿ N.dis.M3.C1908/1944-45, ದಿನಾಂಕ:26.03.1945ರ ರೀತ್ಯಾ ಶ್ರೀ ಮೊಹಮ್ಮದ್ ಖಾಸೀಂ ರವರಿಗೆ 04.00 ಎಕರೆ ಮಂಜೂರಿಯಾಗಿರುವುದು ಕಂಡುಬಂದಿದ್ದು, ಮೂಲ ಮಂಜೂರಾತಿ ಕಡತ ಲಭ್ಯವಿರುವುದಿಲ್ಲ.

ಶ್ರೀ ಮೊಹಮ್ಮದ್ ಖಾಸೀಂ ಇವರು ದಿನಾಂಕ:15.11.2023ರಂದು ಸರ್ವೆ ನಂಬರ್ 604ರಲ್ಲಿ ಮಂಜೂರಾಗಿರುವ 04.00 ಎಕರೆ ಜಮೀನನ್ನು ಏಕ ವ್ಯಕ್ತಿ ಕೋರಿಕೆ ಮೇರೆಗೆ ದುರಸ್ತಿ ಮಾಡುವ ಸಂಬಂಧ ಅರ್ಜಿ ಸಲ್ಲಿಸಿದ್ದು, ಮೂಲ ಮಂಜೂರಾತಿ ಕಡತ ಲಭ್ಯವಿಲ್ಲದ ಕಾರಣ ತಹಶೀಲ್ದಾರ್, ನಾಗಮಂಗಲ ಇವರು ದಿನಾಂಕ: 05.07.2024ರಂದು ಉಪವಿಭಾಗಾಧಿಕಾರಿ, ಪಾಂಡವಪುರ ಉಪವಿಭಾಗ ಇವರಿಗೆ ಮಿಸ್ಸಿಂಗ್ ಕಡತ (ಗೈರು ವಿಲೇವಾರಿ ಕಡತ) ತಯಾರಿಸುವ ಸಂಬಂಧ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಸದರಿ ದುರಸ್ತಿ ಪೋಡಿ ಕಾರ್ಯವನ್ನು ನಮೂನೆ 1-5ರ ತಂತ್ರಾಂಶದಲ್ಲಿ ನಮೂದು ಮಾಡುವ ಸಂಧರ್ಭದಲ್ಲಿ ಖರಾಬು ಎಂದು ನಮೂದಾಗುವ ಬದಲು ಗೋಮಾಳ ಎಂದು ತಪ್ಪಾಗಿ ಅರ್ಜಿ ಸೃಜಿಸಲಾಗಿರುವುದರಿಂದ ದುರಸ್ತಿ ಪೋಡಿ ಕಾರ್ಯ ಕ್ರಮವಹಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ, ಅರ್ಜಿ ಸಂಖ್ಯೆ:6138921010164ನ್ನು ತಿರಸ್ಕೃತಗೊಳಿಸಲಾಗಿದೆ.

ಮೇಲ್ಕಂಡಂತೆ ನ್ಯೂನತೆಯನ್ನು ತಂತ್ರಾಂಶದಲ್ಲಿ ಸರಿಪಡಿಸಲು ಆಯುಕ್ತರು, ಭೂಮಿ ಉಸ್ತುವಾರಿ ಕೋಶ ಬೆಂಗಳೂರು ಇವರನ್ನು ದಿನಾಂಕ:06.02.2025 ರಂದು ಕೋರಲಾಗಿದ್ದು, ನ್ಯೂನ್ಯತೆಯನ್ನು ತಂತ್ರಾಂಶದಲ್ಲಿ ಸರಿಪಡಿಸಿದ ನಂತರ ಸರ್ವೆ ನಂಬರ್ 604ರ ಪೋಡಿ ದುರಸ್ತಿ ಕಾರ್ಯವನ್ನು ತ್ವರಿತವಾಗಿ ಮಾಡಲು ಕ್ರಮವಹಿಸಲಾಗುವುದು.

**ಸಂಖ್ಯೆ: ಕಂಇ 39 ಎಸ್‌ಎಸ್‌ಸಿ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು